

ಗಲಾಟೆ ಮಾಡ್ತು ಅಂತ ಹೇಳಿದಾರೆ.'

'ಯಾರ ಮೇಲೆ ಗಲಾಟೆ ಮಾಡಿಸಬೇಕು ನೀನು.'

'ನಾಳೆ ಬೆಳಗ್ಗೆ ಬಾ ಎಲ್ಲ ಹೇಳ್ತೀನಿ, ಈಗ ಬೇಡ ಅಂತೇಳಿದ್ದಾರೆ. ನಿಂಗೇ ಗೊತ್ತಲ್ಲ, ಯೂನಿವರ್ಸಿಟೀಲಿ ಒಬ್ಬೊಬ್ಬರದು ಒಂದೊಂದು ಜಾತಿ, ಒಂದೊಂದು ಪಾರ್ಟಿ ಅಂತ. ನಮಗ್ಯಾಕೆ ಅವೆಲ್ಲ ಅಂದ್ರೆ ಈ ಪ್ರೊಫೆಸರ್‌ಗಳು ಬಿಡಬೇಕಲ್ಲ. ಇದರೊಂದಿಗೆ ಅದೇನೋ ಮುಂದಿನ ವಾರ 'ವರ್ತಮಾನದ ಇಕ್ಕಟ್ಟು ಬಿಕ್ಕಟ್ಟು, ಸವಾಲುಗಳು, ಅನುಸಂಧಾನ' ಅಂತ ಸ್ಟೇಟ್‌ಲೆವೆಲ್ ಸೆಮಿನಾರ್ ಬೇರೆ ಮಾಡಬೇಕಂತೆ...'

ವರ್ತಮಾನದ ಸಂಗತಿಯ ಅರಿವು ಚೆನ್ನಾಗಿಯೇ ಇದ್ದ ಚಂಪಾ ನಾವು ಆಡುತ್ತಿದ್ದ ಮಾತಿನ ಧಾಟಿ ಬದಲಿಸಲೆಂದು, 'ನೋಡು ನಾವು ಎಂ.ಎ.ಗೆ ಸೇರಿದ್ದು ನಿನ್ನೆ ಮೊನ್ನೆ ಅಂತ ಅನ್ನಿಸ್ತಾ ಇದೆ. ಆದರೆ, ಕೊನೆಯ ಸೆಮಿಸ್ಟರ್ ಬಂದೇಬಿಟ್ಟಿತಲ್ಲ... ತಿಂಗಳು ಕಳೆಯುವುದು ಅಂದರೆ ಕ್ಯಾಲೆಂಡರ್ ಹಾಳೆ ಹರಿದಂತಾಗಿಬಿಟ್ಟಿತಲ್ಲಾ' ಅಂದಳು. ಹಾಗೆ ನೋಡಿದರೆ ಚಂಪಾ ಆಗಾಗ ನನ್ನನ್ನು ಸಾಹಿತ್ಯದ ಓದಿನ ಮತ್ತು ಆಡುತ್ತಿದ್ದ ಉತ್ಪ್ರೇಕ್ಷೆಯ ಮಾತುಗಳ ಭ್ರಮೆಯಿಂದ ಹೊರಗೆಳೆಯುತ್ತಿದ್ದಳು. ಎಳೆಯುವುದು ಇರಲಿ, ಏನೂ ಕಲಿಯದ ನಾನು ಇದ್ದದ್ದೇ ಹೊರಗೆ! ಆದರೆ, ಅವಳ ಮುಂದೆ ನಿಲ್ಲುತ್ತಿದ್ದಂತೆಯೇ ನನ್ನ ಪ್ರಾಯಗಾಲದ ವಯೋಮಾನ, ಕ್ಷಣಮಾತ್ರದಲ್ಲಿ ಭ್ರಮೆಯ ಲೋಕವನ್ನು ಪ್ರವೇಶಿಸಿಬಿಡುತ್ತಿತ್ತೋ ಏನೊ?

***

ನಾನು ಒಮ್ಮೆ, 'ಚಂಪಾ ಇಷ್ಟು ದಿನವೂ ನೀನು ನನ್ನ ಕೈಯ್ಯಲ್ಲೇ ಮಾತಾಡಿಸುತ್ತಿದ್ದೆ. ನಿನ್ನ ಊರುಕೇರಿಯ ಸಮಾಚಾರ ಏನೂ ಹೇಳಲೇ ಇಲ್ಲವಲ್ಲ' ಅಂದೆ. ಅವಳು, 'ಅಯ್ಯೋ ಹುಡುಗಿಯರದೇನು ಇರುತ್ತದೆ ಬಿಡೋ, ನಾಲ್ಕು ಗೋಡೆಯ ಒಳಗಿನ ಕಥೆ. ನೀನಾದರೆ ಕಾಡು ಮೇಡು, ಊರು ಕೇರಿ, ದಿನ ಬೆಳಗಾದರೆ ಈ ಸಿಟಿಯ ಹಾದಿಬೀದಿ ಎಲ್ಲ ಕಂಡವನು. 'ನೋಡು, ನೀನು ಅದೆಷ್ಟು ಇಂಟರೆಸ್ಟಿಂಗಾಗಿ ಹರಟೆ ಹೊಡೆಯುತ್ತೀಯಾ. ಊರಿಗೆ ಹೋದರೆ ನನ್ನದು ಅದೇ ನಾಲ್ಕು ಗೋಡೆಯ ಅರಮನೆ' ಅಂದಳು. ಅವಳು ಹಾಗಂದದ್ದೇ, 'ಅರಮನೆ ಅಂದರೆ, ಅದು ಯಾವ ಥರದ ಅರಮನೆ ಅಂತಾದರೂ ಹೇಳಬಹುದಲ್ಲ' ಅಂದೆ. ಹೀಗೆನ್ನುವಲ್ಲಿ ಅವಳ ಸಾಂಸಾರಿಕ ವಿಷಯ